**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

ಸಿ.ಸಿ. ನಂಃ 1027/2025
ಸಿ.ಡಬ್ಲ್ಯೂಃ 4
ಪಿ.ಡಬ್ಲ್ಯೂಃ 3

ಸಾಕ್ಷಿದಾರರ ಹೆಸರುಃ ಪ್ರವೀಣ್

ತಂದೆಯ ಹೆಸರುಃ ಅಣ್ಣು ಪೂಜಾರಿ

ವಯಸ್ಸುಃ 38 ವರ್ಷ

ಉದ್ಯೋಗಃ ರಿಕ್ಷಾ ಚಾಲಕ

ವಾಸಸ್ಥಳಃ ಮಾಡ್ನೂರು ಗ್ರಾಮ

ದಿನಾಂಕ 04-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 09-11-2024 ರಂದು ನಾನು ಈಶ್ವರಮಂಗಲದಿಂದ ಗಾಳಿ ಮುಖಕ್ಕೆ ಬೈಕ್ ನಲ್ಲಿ ಹೋಗುತ್ತಿದ್ದೆ. ಆಗ ನನ್ನ ಬೈಕ್ ನ ಹಿಂದಿನಿಂದ ಹಾರ್ನ್ ಕೇಳಿ ಬಂತು. ನಾನು ಏನು ಎಂದು ಶಬ್ದ ಬಂದ ಕಡೆ ನೋಡಿದಾಗ ಒಂದು ಪಿಕಪ್ ವಾಹನ ಹೋಗುತ್ತಿತ್ತು. ಅದರ ಹಿಂದೆ ಪೊಲೀಸರು ಬೈಕಿನಲ್ಲಿ ಹೋಗುತ್ತಿದ್ದರು. ನಾನು ಬೆಳ್ಳಿಚಡಾವು ಎನ್ನುವಲ್ಲಿ ಹೋದಾಗ ಟರ್ಪಾಲ್ ಕಟ್ಟಿದ ಪಿಕಪ್ ವಾಹನ ವನ್ನು ಅದರ ಚಾಲಕ ಅಲ್ಲಿನ ರಸ್ತೆ ಪಕ್ಕದಲ್ಲಿ ನಿಲ್ಲಿಸಿ ಓಡಿ ಹೋದನು. ವಾಹನದ ಇನ್ನೊಂದು ಬದಿಯಲ್ಲಿ ಇದ್ದ ಸಹಸವಾರ ಆತನು ಕೂಡಾ ಓಡಿ ಹೋದನು. ಅವರನ್ನು ಬೆನ್ನಟ್ಟಿ ಪೊಲೀಸರು ಕೂಡಾ ಓಡಿ ಹೋದರು. ಆಗ ಸಮಯ 09.05 ಆಗಿತ್ತು. ಪಿಕಪ್ ವಾಹನದಿಂದ ಜಾನುವಾರುಗಳು ಶಬ್ದ ಮಾಡಿದ್ದು ಕೇಳಿಸಿತು. ನಂತರ ಸ್ಥಳಕ್ಕೆ ಪೊಲೀಸರು ವಾಪಾಸ್ಸು ಬಂದಿದ್ದು ಅವರು ನಮ್ಮ ಸಮಕ್ಷಮ ಪಿಕಪ್ ವಾಹನದಲ್ಲಿ ಕಟ್ಟಲಾಗಿದ್ದ ಟರ್ಪಾಲ್ ನ್ನು ಬಿಚ್ಚಿದಾಗ ಅದರಲ್ಲಿ 2 ದನ,1 ಕರು , 2 ಹೋರಿಗಳು ಇದ್ದವವು. ಹೋರಿಗಳ ಕೈ ಕಾಲು ಬಾಯಿ ಕಟ್ಟಿ ಕೂರಿಸಲಾಗಿತ್ತು. ನಂತರ ಪೊಲೀಸರು ನಾವೆಲ್ಲ ಸೇರಿ ಹಗ್ಗವನ್ನು ಬಿಚ್ಚಿದೆವು. ನಾವು ನೋಡಿದಾಗ ಅಲ್ಲಿ ಇದ್ದ ಒಂದು ಕರು ಸತ್ತು ಹೋಗಿತ್ತು. ವಾಹನದಲ್ಲಿ ಜಾನುವಾರುಗಳನ್ನು ಕ್ರೂರತನದಿಂದ ಕಟ್ಟಲಾಗಿತ್ತು. ಜಾನುವಾರುಗಳನ್ನು ಕೇರಳಕ್ಕೆ ಮಾಂಸ ಮಾಡುವ ಉದ್ದೇಶದಿಂದ ಸಾಗಿಸುತ್ತಿರುವುದಾಗಿ ಕಂಡು ಬಂತು.

2. ನಂತರ ಸಂಜೆ ಪೊಲೀಸರು ನನ್ನನ್ನು ಠಾಣೆಗೆ ಕರೆದಿದ್ದರು. 15 ದಿವಸಗಳ ನಂತರ ಪೊಲೀಸರು ನನ್ನನ್ನು ಸಂಪ್ಯ ಪೊಲೀಸು ಠಾಣೆಗೆ ಕರೆಸಿದ್ದರು. ಪೊಲೀಸು ಠಾಣೆಗೆ ವಾಹನದಿಂದ ಓಡಿಹೋದ ಡ್ರೈವರ್ ಮತ್ತು ಸಹಸವಾರ ಜಾಮೀನು ಪಡೆದು ಬಂದಿದ್ದರು. ಪೊಲೀಸರು ಅವರು ಅಲ್ಲಿದ್ದ ವ್ಯಕ್ತಿಗಳನ್ನು ತೋರಿಸಿ ವಿಚಾರ ಮಾಡಿದ್ದು ನಾನು ಅವರನ್ನು ತಕ್ಷೀರು ನಡೆದ ಸ್ಥಳದಲ್ಲಿ ಇದ್ದ ವ್ಯಕ್ತಿಗಳು ಎಂದು ಗುರುತಿಸಿದೆನು. ಅದಾದ ನಂತರ 4 ತಿಂಗಳ ನಂತರ ಪೊಲೀಸು ಠಾಣೆಗೆ ಕರೆದಿದ್ದರು. ಆಗ ಪೊಲೀಸು ಠಾಣೆಯಲ್ಲಿ ಇನ್ನೊಬ್ಬ ವ್ಯಕ್ತಿ ಇದ್ದರು. ಅವರನ್ನು ಪೊಲೀಸರು ತೋರಿಸಿ ಆತ ದನಗಳನ್ನು ಸಂಗ್ರಹಿಸಿ ಕೇರಳಕ್ಕೆ ಮಾಂಸಕ್ಕಾಗಿ ಮಾರಾಟ ಮಾಡುತ್ತಾರೆ ಎಂದು ತಿಳಿಸಿದರು. ಈ ಪ್ರಕರಣಕ್ಕೆ ಸಂಬಂಧಪಿದಂತೆ ಪೊಲೀಸರು ನನ್ನನ್ನು 3 ಬಾರಿ ವಿಚಾರಣೆ ಮಾಡಿದ್ದಾರೆ.

3. ಹಿಂಸಾತ್ಮಕವಾಗಿ ಕಟ್ಟಿಹಾಕಲಾಗಿತ್ತು ಎನ್ನಲಾದ ಜಾನುವಾರುಗಳನ್ನು ಹಾಗೂ ಪಿಕಪ್ ವಾಹನವನ್ನು ನೋಡಿದರೆ ಗುರುತಿಸಬಲ್ಲೆ. ನಿ.ಪಿ.6 , 7 ಮತ್ತು 10 ರಲ್ಲಿ ಬಾವಚಿತ್ರಗಳಲ್ಲಿ ಕಾಣುವ ಜಾನುವಾರುಗಳನ್ನು ನೋಡಿ ಗುರುತಿಸಿರುತ್ತಾರೆ. ಪೊಲೀಸರು ನನಗೆ ತೋರಿಸಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಹೆಚ್ .ಪಿ.ಆರ್. ವಕೀಲರಿಂದಃ**

4. ನನ್ನ ಮನೆ ಮಾಡ್ನೂರು ಗ್ರಾಮದಲ್ಲಿ ಇದೆ. ಮಾಡ್ನೂರು ಗ್ರಾಮದಿಂದ ಈಶ್ವರ ಮಂಗಲಕ್ಕೆ ಎರಡೂವರೆ ಕಿ.ಮೀ ದೂರ ಇದೆ. ನಾನು ಆ ದಿನ ಬೆಳಿಗ್ಗೆ 08.00 ಗಂಟೆಗೆ ಮನೆಯಿಂದ ಹೊರಟಿದ್ದೇನೆ. ನಾನು ಬಂದ ಬೈಕಿನ ನೋಂದಣಿ ಸಂಖ್ಯೆ ಹೇಳಲಾಗುವುದಿಲ್ಲ ಕಾರಣ ಆ ಬೈಕ್ ನನ್ನ ಸ್ನೇಹಿತನದ್ದು . ನಾನು ಆ ದಿನ ಸ್ನೇಹಿತ ಬೈಕಿನಲ್ಲಿ ಬಂದಿದ್ದ ಬಗ್ಗೆ ಪೊಲೀಸರಿಗೆ ತಿಳಿಸಿಲ್ಲ. ಪೊಲೀಸರಿಗೆ ನಾನುಯಾವುದೇ ಹೇಳಿಕೆ ನೀಡಿಲ್ಲ. ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿರುವ ಫೋಟೋದಲ್ಲಿ ನನ್ನ ಇರುವಿಕೆ ಕಂಡು ಬರುವುದಿಲ್ಲ ಎಂದರೆ ಸರಿ.

5. ಹಾರ್ನ್ ಶಬ್ದವನ್ನು ಕೇಳಿ ಬಂದ ಸ್ಥಳದಿಂದ ತಕ್ಷೀರು ನಡೆದ ಸ್ಥಳ ಸ್ವಲ್ಪ ದೂರ ಇತ್ತು. ಎಷ್ಟು ದೂರ ಇತ್ತು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ನೋಡಿದಾಗ ಪಿಕಪ್ ವಾಹನ ರಸ್ತೆಯ ಎಡಬದಿಯಲ್ಲಿ ಇತ್ತು. ನಾನು ಸ್ಥಳಕ್ಕೆ ಹೋದಾಗ ಅಲ್ಲಿ 10 ಜನ ಸಾರ್ವಜನಿಕರು ಇದ್ದರು.

6. ಬೆಳ್ಳಿಚಡಾವು ಎನ್ನುವ ಸ್ಥಳದಲ್ಲಿ ತುಂಬಾ ವಾಸದ ಮನೆಗಳು ಇದೆ ಎಂದರೆ ಸರಿ. ಸ್ಥಳಕ್ಕೆ ಆಚೆ ಈಚೆ ಮನೆಯವರು ಬಂದ ಬಗ್ಗೆ ನನಗೆ ಗೊತ್ತಿಲ್ಲ. ಪಿಕಪ್ ವಾಹನದ ನಿರ್ದಿಷ್ಟ ನೋಂದಣಿ ಸಂಖ್ಯೆ ನನಗೆ ಹೇಳಲು

ಆಗುವುದಿಲ್ಲ. ಅಲ್ಲಿ ಒಂದು ಕೆಂಪು ಬಣ್ಣದ ದನ, ಒಂದು ಕಪ್ಪು ಬಿಳಿ ಬಣ್ಣದ ಹೋರಿ , ಕಂದು ಬಣ್ಣದ ಸತ್ತ ಕರು ಇತ್ತು. ಇದ್ದ ಬೇರೆ ಜಾನುವಾರುಗಳು ಬಣ್ಣ ಹೇಳಲು ಆಗುವುದಿಲ್ಲ. ಬಿಳಿ ಬಣ್ಣದ ಹಗ್ಗಗಳಿಂದ ಜಾನುವಾರುಗಳನ್ನು ಕಟ್ಟಹಾಕಲಾಗಿತ್ತು. 5 ಹಗ್ಗಗಳಿಂದ ಜಾನುವಾರುಗಳನ್ನು ಕಟ್ಟಿದ್ದರು.

7. ಪೊಲೀಸು ಠಾಣೆಗೆ ನಾನು ಯಾವ ನಿರ್ದಿಷ್ಟ ದಿನಾಂಕಗಳನ್ನು ಹೋಗಿದ್ದೇನೆ ಎಂದು ಹೇಳಲು ಆಗುವುದಿಲ್ಲ. ಓಡಿ ಹೋದ ವ್ಯಕ್ತಿಗಳ ಹೆಸರು ಹೇಳಲಾಗುವುದಿಲ್ಲ ಪೂಲೀಸರ ಹೆಸರು ಬಸವರಾಜು ಮತ್ತು ಬಾಲಕೃಷ್ಣ. ಪೊಲೀಸರು ಹೇಳಿದ ಕಾರಣ ಆರೋಪಿಗಳ ವಿವರಗಳು ಮತ್ತು ಹೆಸರು ಗೊತ್ತಾಗಿದೆ ಎಂದರೆ ಸರಿ. ಆರೋಪಿಗಳನ್ನು ಇದೇ ಪ್ರಥಮವಾಗಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಕೃಷ್ಣ ಪ್ರಸಾದ್ ಹಾಗೂ ನಾನು ಸ್ನೇಹಿತರು. ನಾನು ಬಿಜೆಪಿ ಪಕ್ಷದಲ್ಲಿ ಹಾಗೂ ಯಾವ ಸಂಘಟನೆಯಲ್ಲಿ ಇಲ್ಲ. ಈಶ್ವರಮಂಗಲ ಎನ್ನುವ ಪ್ರದೇಶ ಕೋಮುಗಲಭೆ ಹೆಚ್ಚು ಆಗುವ ಪ್ರದೇಶದ ಎಂದರೆ ನನಗೆ ಗೊತ್ತಿಲ್ಲ.

8.ನಾನು ಬೆಳ್ಳಿಚಡಾವು ಎನ್ನುವ ಸ್ಥಳದಲ್ಲಿ 3 ಗಂಟೆ ಇದ್ದೆ. ನಾನು ಪ್ರಥಮವಾಗಿ ಬೆಳ್ಳಿಚಡಾವುಗೆ ಹೋದಾಗ ಪಿಕಪ್ ವಾಹನ ಜಾನುವಾರುಗಳನ್ನು ಸಾರ್ವಜನಿಕರು ಇಳಿಸಿದ್ದಾರೆ. ಸುರೇಶ್ , ಪ್ರಕಾಶ್ , ಪ್ರವೀಣ್, ಕೃಷ್ಣ ಪೊಲೀಸರು ಇದ್ದರು. ಸುರೇಶ್ , ಪ್ರಕಾಶ್ , ಪ್ರವೀಣ್, ಕೃಷ್ಣ ನನಗೆ ನೋಡಿ ಪರಿಚಯ. ನಾನು ಹಿಂದೂ ಸಂಘಟನೆಯಲಿ ಇದ್ದೆನು ಹಾಗೂ ನಾವೆಲ್ಲ ಸೇರಿ ಸುಳ್ಳು ಪ್ರಕರಣವನ್ನು ಆರೋಪಿತರ ವಿರುದ್ಧ ದಾಖಲಿಸಿದ್ದೇವೆ ಎಂದರೆ ಸುಳ್ಳು. ಈ ಘಟನೆಗೂ ಹಾಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

9. ವಿಚಾರಣೆಗೆ ಹಾಜರಾಗಬೇಕೆಂದು ಪೊಲೀಸರು ನನಗೆ ಲಿಖಿತ ನೋಟೀಸು ಕೊಟ್ಟಿಲ್ಲ. ಫೋನ್ ಮಾಡಿ ಕರೆಸಿದ್ದರು. ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿದ ಫೋಟೋಗಳಿಗೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನಾನು ಹೇಳುವ ದಿನ ಅಕ್ರಮವಾಗಿ ಸಾಗಾಟ ಮಾಡಿಲ್ಲ ಎಂದರೆ ಸರಿಯಲ್ಲ. ಸತ್ತು ಹೋದ ಕರು ನಿಖರವಾಗಿ ಪ್ರಾಯ ಎಷ್ಟು ಅಗಿತ್ತು ಎಂದು ಹೇಳಲು ಆಗುವುದಿಲ್ಲ. ಸ್ಥಳದಲ್ಲಿ ನಾನು ಇದ್ದಾಗ ಪೊಲೀಸರು ಪಶುವೈದ್ಯಾಧಿಕಾರಿಯನ್ನು ಕರೆಸಿದ್ದರು. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು ದ.ಕ.